**ದಿನಾಂಕ: 24-06-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ VCMP ವಕೀಲರಿಂದ**

1. ನೀವು ಏನು ಕೆಲಸ ಮಾಡುತಿದ್ದೀರಿ ಎಂದರೆ ಹಿಟ್ಟಿನ ಗಿರಣಿ ಇದೆ ಎಂದು ಉತ್ತರಿಸುತ್ತಾರೆ. ಹಿಟ್ಟಿನ ಗಿರಣಿಗೆ ಪರವಾನಿಗೆ ಇದೆ ಎಂದು ತೋರಿಸಲು ಪರವಾನಿಗೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಹಿಟ್ಟಿನ ಗಿರಣಿಯಿಂದ ಎಷ್ಟು ಆದಾಯ ಬರುತ್ತದೆ ಎಂದರೆ ದಿನಕ್ಕೆ 500 ರಿಂದ 600 ಆದಾಯ ಬರುತ್ತದೆ ಎಂದು ಉತ್ತರಿಸುತ್ತಾರೆ. ಹಿಟ್ಟಿನ ಗಿರಣಿಗೆ ಪರವಾನಿಗೆ ಇದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಹಿಟ್ಟಿನ ಗಿರಣಿಯಿಂದ ದಿನಕ್ಕೆ 500 ರಿಂದ 600 ಆದಾಯ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಅಪಘಾತದ ಸಮಯದಲ್ಲಿ ನಿಮಗೆ ಎಷ್ಟು ವರ್ಷ ವಯಸ್ಸಿತ್ತು ಎಂದರೆ 39 ಎಂದು ಉತ್ತರಿಸುತ್ತಾರೆ. ನಿಮ್ಮ ವಯಸ್ಸು ತೋರಿಸಲು ಆಧಾರ್ ಕಾರ್ಡ್ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ವಯಸ್ಸು 45 ರಿಂದ 50 ವರ್ಷ ಇದೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

3. ಅಪಘಾತವಾದ ದಿನ ನಮ್ಮ ಊರಾದ ಹಂಗರಗಾ ಬಿ ಯಿಂದ ಯಡ್ರಾಮಿಗೆ ಮೋಟಾರ್ ಸೈಕಲ್ ಮೇಲೆ ಹೋಗುತ್ತಿದ್ದೆ. ಆ ದಿನ ಮೋಟಾರ್ ಸೈಕಲನ್ನು ನಾನು ಚಲಾಯಿಸುತ್ತಿದ್ದೆನು. ನನ್ನ ಜೊತೆಯಲ್ಲಿ ಶ್ರೀನಿವಾಸ ಇದ್ದನು. ನಿಮಗೆ ಮೋಟಾರ್ ಸೈಕಲ್ ಚಲಾಯಿಸಲು ಪರವಾನಿಗೆ ಇತ್ತಾ ಎಂದರೆ ಇತ್ತು ಎಂದು ಉತ್ತರಿಸುತ್ತಾರೆ. ಯಾವ RTO ರವರ ಪರವಾನಿಗೆ ಇತ್ತು ಎಂದರೆ ಬಾಂಬೆ RTO ರವರಿಂದ 2003 ರಲ್ಲಿ ಪರವಾನಿಗೆ ಪಡೆದಿರುತ್ತೇನೆ. ಅಪಘಾತವಾದ ಸಮಯದಲ್ಲಿ ಮೂಲ ಪರವಾನಿಗೆ ಕಳೆದು ಹೋಗಿರುತ್ತದೆ. ಪರವಾನಿಗೆ ಕಳೆದು ಹೋಗಿರುವ ಬಗ್ಗೆ ಪೊಲೀಸ್ ದೂರು ಏನಾದರೂ ನೀಡಿದ್ದೀರಾ ಎಂದರೆ

ಇಲ್ಲ ಎಂದು ಉತ್ತರಿಸುತ್ತಾರೆ. ಬಾಂಬೆ RTO ರವರಿಗೆ ಪರವಾನಿಗೆ ಬಗ್ಗೆ ಅರ್ಜಿ ಏನಾದರೂ ನೀಡಿದ್ದಿರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಹತ್ತಿರ ಯಾವುದೇ ಪರವಾನಿಗೆ ಇಲ್ಲದಿದ್ದರೂ ಸಹ ಪರವಾನಿಗೆ ಕಳೆದುಹೋಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ಹೆಲ್ಮೇಟ್ ಧರಿಸಿರಲಿಲ್ಲ ನಿಮ್ಮ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ.

4. ಅಪಘಾತ ಯಾವ ರೀತಿ ಆಯಿತು ಎಂದರೆ ಪಲ್ಸರ್ ಮೋಟಾರ್ ಸೈಕಲ್ ಎದುರುಗಡೆಯಿಂದ ಬಂದು ಅಪಘಾತಪಡಿಸಿರುತ್ತದೆ. ಅಪಘಾತವು ಯಡ್ರಾಮಿ ಮೇನ್ ಕ್ಯಾನಲ್ ಹತ್ತಿರ ಮಧ್ಯಾಹ್ನ 1 ಗಂಟೆಗೆ ಆಗಿರುತ್ತದೆ. ಅಪಘಾತಪಡಿಸಿದ ವಾಹನ ಸಂಖ್ಯೆ ಏನು ಇದೆ ಎಂದರೆ ಕೆಎ-32 ಇವೈ-2571 ಎಂದು ಉತ್ತರಿಸುತ್ತಾರೆ. ಎದುರು ವಾಹನದ ಚಾಲಕನ ತಪ್ಪಿನಿಂದ ಯಾವುದೇ  ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನೀವೇ ರಾಂಗ್ ಸೈಡಿಗೆ ಬಂದು ಎದುರು ಬರುವಂತಹ ವಾಹನಕ್ಕೆ ಡಿಕ್ಕಿಪಡಿಸಿದ್ದೀರಿ ಎಂದರೆ ಸರಿಯಲ್ಲ.

5. ಅಪಘಾತದಲ್ಲಿ ನಿಮಗೆ ಎಲ್ಲಿ ಗಾಯವಾಗಿದೆ ಎಂದರೆ ಕಣ್ಣಿನ ಹುಬ್ಬಿನ ಮೇಲೆ ಹಾಗೂ ಕಣ್ಣಿನ ಕೆಳಗೆ, ಬಲಗಾಲಿಗೆ , ಬೆನ್ನಿಗೆ ಪೆಟ್ಟಾಗಿರುತ್ತದೆ. ಅಪಘಾತವಾದ ನಂತರ ಮಣ್ಣೂರ ಆಸ್ಪತ್ರೆಗೆ ತೋರಿಸಿರುತ್ತೇನೆ. ಮೊದಲು ಯಡ್ರಾಮಿಯ ಸರಕಾರಿ ಆಸ್ಪತ್ರೆಗೆ ತೋರಿಸಿದ ನಂತರ ಮಣ್ಣೂರ ಆಸ್ಪತ್ರೆಗೆ ಹೋಗಿರುತ್ತೇನೆ. ಮಣ್ಣೂರ ಆಸ್ಪತ್ರೆಯಲ್ಲಿ 3 ದಿನ ಒಳ ರೋಗಿ ಆಗಿದ್ದೆನು. ಮಣ್ಣೂರ ಆಸ್ಪತ್ರೆಯಲ್ಲಿ ಎಷ್ಟು ಖರ್ಚಾಗಿದೆ ಎಂದರೆ ಒಂದೂವರೆ ಲಕ್ಷ ಖರ್ಚಾಗಿದೆ ಎಂದು ಉತ್ತರಿಸುತ್ತಾರೆ. ಒಂದೂವರೆ ಲಕ್ಷ ಖರ್ಚಾಗಿದೆ ಎಂದು ತೋರಿಸಲು ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ. ಒಂದೂವರೆ ಲಕ್ಷ ಖರ್ಚಾಗಿದೆ ಎಂದು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಬಿಲ್ಲುಗಳನ್ನು ಸೃಷ್ಠಿ ಮಾಡಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. 2023ರಲ್ಲಿ ಅಪಘಾತವಾಗಿದ್ದು ಈಗ ನಿಮಗೆ ಯಾವುದೇ ಕೆಲಸ ಮಾಡಲು ತೊಂದರೆ ಇಲ್ಲ ನೀವು ಮೊದಲಿನ ತರಹ ಕೆಲಸ ಮಾಡುತ್ತಿದ್ದೀರಿ ಎಂದರೆ ಕೆಲಸ ಮಾಡಲು ತೊಂದರೆ ಆಗುತ್ತಿದೆ ಎಂದು ಉತ್ತರಿಸುತ್ತಾರೆ.

6. ಎದುರು ವಾಹನದ ಮೇಲೆ ಪೊಲೀಸರು ಕೇಸನ್ನು ಹಾಕಿದರೆ ಅದರಲ್ಲಿ ಆತನು ದಂಡವನ್ನು ಸಹ ಕಟ್ಟಿದ್ದಾನೆ ಎಂದರೆ ಆತನ ಹತ್ತಿರ ಪರವಾನಿಗೆ ಇದೆಯೋ ಇಲ್ಲವೊ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನೀವು ಯಾವುದೇ ಆಧಾರ ಇಲ್ಲದೇ ಈ ಕೇಸಿನಲ್ಲಿ ಪರಿಹಾರವನ್ನು ಕೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಎಲ್ಲ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ ಸುಳ್ಳು ಕೇಸನ್ನು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ